**SC No. 34/2018**
**PW-29**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 34/2018

| | | |
|---|---|---|
| ಸಾಕ್ಷಿದಾರರ ಹೆಸರು | ನಂದೀಶ್ ಬಿ.ಎಸ್. | ಪ್ರಮಾಣ ವಚನ ಮಾಡಿದ ದಿನಾಂಕ: 09.02.2026 |
| ತಂದೆಯ/ಗಂಡನ ಹೆಸರು | ಶ್ರೀನಿವಾಸಮೂರ್ತಿ | |
| ವಯಸ್ಸು | 41 ವರ್ಷ | |
| ವೃತ್ತಿ | ಮೋಟಾರು ವಾಹನ ನಿರೀಕ್ಷಕರು, ಟಿಪಟೂರು | ಪ್ರಾ.ಸಾಃ 29 |
| ವಾಸ ಸ್ಥಳ | ಟಿಪಟೂರು | ಚಾ.ಸಾಃ 42 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು *27.01.2014* ರಿಂದ *30.07.2020* ರವರೆಗೆ ***R.T.O*** ಮೈಸೂರು ಪೂರ್ವ ಕಛೇರಿಯಲ್ಲಿ ಮೋಟಾರು ವಾಹನ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ 19.01.2017 ರಂದು ಚಾಸಾ-78 ರವರು ಉದಯಗಿರಿ ಪೊಲೀಸ್ ಠಾಣಾ ಮೊ.ಸಂಖ್ಯೆ 59/2016 ರ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಂಬರ್ ಇಲ್ಲದೆ TVS victor ದ್ವಿಚಕ್ರ ವಾಹನದ ಇಂಜಿನ್ ಮತ್ತು ಚಾಸಿಸ್ ನಂಬರ್ ವಿಲೇವಾರಿ ಮಾಡಿರುತ್ತಾರೆ ಉಳಿದ ಭಾಗಗಳನ್ನು ಮಾಲು ಪಟ್ಟಿ ಸಂಖ್ಯೆ 46/16 ರಲ್ಲಿ ವಶಪಡಿಸಿಕೊಂಡಿರುವ ಬಿಡಿ ಭಾಗಗಳನ್ನು ಪರಿಶೀಲಿಸಲು ಮನವಿ ಸಲ್ಲಿಸಿದ್ದರು ಅದರಂತೆ ನಾನು ದಿನಾಂಕ

20.01.2017 ಬೆಳಗ್ಗೆ 8.00 ಗಂಟೆ ಸಮಯದಲ್ಲಿ ಸಹಾಯಕ ಪೊಲೀಸ್ ಆಯುಕ್ತರು ನಗರ ಅಪರಾಧ ವಿಭಾಗ ರವರ ಕಛೇರಿ ಆವಾರಣದಲ್ಲಿ ಮಾಲು ಪಟ್ಟಿ ಸಂಖ್ಯೆ ಯಲ್ಲಿ ನೀಡಿರುವ ಬಿಡಿ ಭಾಗಗಳನ್ನು ಪರಿಶೀಲಿಸಿ ಸದರಿಯವುಗಳು TVS victor ದ್ವಿಚಕ್ರ ವಾಹನಕ್ಕೆ ಸಂಬಂಧಪಟ್ಟವು ಎಂದು ನನ್ನ ವರದಿ ಸಲ್ಲಿಸಿದ್ದೆನು. ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.53 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ. 53(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ TVS victor ದ್ವಿಚಕ್ರ ವಾಹನದ 23 ಬಿಡಿ ಭಾಗಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಎಂ.ಒ–14 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**